

ಚಾಮರಾಜನಗರ ಜಿಲ್ಲೆಯ ಬಂಡೀಪುರ ಅರಣ್ಯದಲ್ಲಿ ಬೆಂಕಿಯ ಕೆನ್ನಾಲಿಗೆಗಳಿಗೆ ಸಾಕ್ಷಿಯಾಗಿರುವ ಒಂಟಿ ಹಕ್ಕಿ (ಸಂಗ್ರಹ ಚಿತ್ರ)

## ನಾವೇನು ಮಾಡಬೇಕು?

- ಬೀಡಿ–ಸಿಗರೇಟುಗಳನ್ನು ಎಸೆಯುವಾಗ ಅದರಲ್ಲಿ ಕಿಡಿಯಿರದಂತೆ ನೋಡಿಕೊಳ್ಳಬೇಕು.
- ಮನೆಯ ಹೊರಗೆ ಒಲೆ ಹೂಡಿದಾಗ, ಅದನ್ನು ನಂದಿಸಿದ ಬಳಿಕವೇ ಅಲ್ಲಿಂದ ತೆರಳಬೇಕು.
- ಬೆಂಕಿ ಬಿದ್ದಲ್ಲಿ ಅದನ್ನು ನಂದಿಸಲು ತೆರಳುವ ಮಾರ್ಗಗಳನ್ನು ಮುಚ್ಚಬಾರದು.
- ಧಾರ್ಮಿಕ ಆಚರಣೆಗಳನ್ನು ನಿರ್ವಹಿಸುವಾಗ ಮುತುವರ್ಜಿ ವಹಿಸಿ, ಬೆಂಕಿಯು ಹರಡದಂತೆ ನೋಡಿಕೊಳ್ಳಬೇಕು.

ಕಂಡು ಶಿಶಿಲದ ನಿವಾಸಿಗಳು ಕಂಗಾಲಾಗಿ, ರಾತ್ರಿ ಹಗಲು ಎಚ್ಚರದಿಂದ ಕಾವಲು ಕಾಯಬೇಕಾಯಿತು. ಊರೊಳಗೆ ಬರುವ ಆನೆಗಳ ಭಯ, ಹೊತ್ತಿಕೊಂಡು ಬರುತ್ತಿರುವ ಬೆಂಕಿಯ ಆತಂಕವು ಪರಿಸ್ಥಿತಿಯನ್ನು ಹದಗೆಡುವಂತೆ ಮಾಡಿವೆ. ಅತ್ತ ಮಲೆಮಹದೇಶ್ವರ ಬೆಟ್ಟದಲ್ಲಿ ಇತ್ತೀಚೆಗಿನ ವರ್ಷಗಳಲ್ಲಿ ಹುಲಿಗಳ ಸಂಖ್ಯೆ ಹೆಚ್ಚಾಗಿದೆ ಎಂದು ವರದಿಯಾಗಿತ್ತು. ಅಲ್ಲಿನ ದಟ್ಟಕಾಡುಗಳಲ್ಲಿ ಕಾಣಿಸಿಕೊಂಡ ಬೆಂಕಿಯು ಹುಲಿಗಳನ್ನೂ ಇದೇ ಮಾದರಿಯಲ್ಲಿ ಕಂಗಾಲು ಮಾಡಿದೆ. ಅದರ ಪರಿಣಾಮವಂತೂ ಇನ್ನೂ ಆತಂಕಕಾರಿ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಗೋಪಾಲಸ್ವಾಮಿ ಬೆಟ್ಟ ಅರಣ್ಯವಲಯದ ಗೌರಿಕಲ್ಲು ಬೆಟ್ಟದಲ್ಲಿ ಅಗಾಧ ಬೆಂಕಿ ಕಾಣಿಸಿಕೊಂಡಿತ್ತು. ಬಂಡೀಪುರ ಅರಣ್ಯದಲ್ಲಿ ವಾರವಿಡೀ ಬೆಂಕಿ ಉರಿದು ಮುಗಿಯುತ್ತಿದ್ದಂತೆಯೇ ಮಲೆಮಹದೇಶ್ವರ ಬೆಟ್ಟದ ‘ಕಾವೇರಿ ವನ್ಯಜೀವಿ ಧಾಮ’, ಹನೂರಿನ ಪೊನ್ನಾಚಿಯಲ್ಲಿ ಕಾಳ್ಗಿಚ್ಚು ಹೊತ್ತಿಕೊಂಡು ಹಸುರನ್ನು ಭಸ್ಮ ಮಾಡುತ್ತ ಸಾಗಿತು. ಹುಲಿ–ಆನೆಗಳ ಕಥೆ ಹೀಗಾದರೆ, ಸರೀಸೃಪಗಳ ಪಾಡು ಮತ್ತೊಂದು ರೀತಿಯದ್ದು. ಕಾಡಿಗೆ ಬೆಂಕಿ ಬಿದ್ದರೆ ಕಾಡಿನಂಚಿನ ಊರಿನಲ್ಲಿರುವ ಮನೆಗಳಿಗೆ ಹಾವು–ಚೇಳುಗಳು ಸರಬರನೆ ಹರಿದು ಬರುತ್ತವೆ.

ಪಶ್ಚಿಮ ಘಟ್ಟದ ತಪ್ಪಲಿನ ಸಿರಿಬಾಗಿಲು ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡಿದ್ದರಿಂದ ಮಂಗಳೂರಿನಿಂದ ಬೆಂಗಳೂರಿಗೆ ಹೋಗುವ ರೈಲುಗಳು ತಡವಾಗಿದ್ದು ಮಾತ್ರವಲ್ಲ, ರೈಲು ನೀರು ತುಂಬಿದ ಬೋಗಿಯನ್ನು ಹೊತ್ತುಕೊಂಡು ಹೋಗಿ ತನ್ನ ದಾರಿಯನ್ನು ತಾನೇ ತಂಪು ಮಾಡಿಕೊಂಡು ಮುಂದೆ ಸಾಗಬೇಕಾಯಿತು. ಹತ್ತು ಸಾವಿರ ಲೀಟರ್ ನೀರು ಹೊತ್ತುಕೊಂಡು ರೈಲು ಪಶ್ಚಿಮ